**ದಿನಾಂಕಃ 27.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ. ಎ.ಬಿ.ಸಿ. ವಕೀಲರಿಂದಃ**

1. ನಾನು ಎಮ್.ಎಸ್.ಸಿ. ಬಿ.ಎಡ್ ಪದವಿಧರ. ನಾನು ನಿವೃತ್ತ ಶಿಕ್ಷಕ. ಈ ಪ್ರಕರಣವನ್ನು ದಾಖಲಿಸುವ ಕಾಲಕ್ಕೆ ನಾನೇ ಮಾಹಿತಿಯನ್ನು ನಮ್ಮ ವಕೀಲರಿಗೆ ನೀಡಿ ತಯಾರು ಮಾಡಿ ಸಲ್ಲಿಸಿರುತ್ತೇನೆ. ನನ್ನ ಅಜ್ಜನ ಹೆಸರು ಲಕ್ಷ್ಮಣ ಜಾದವ ಅನ್ನುವುದು ಸರಿ. ಅವರು ಬೀಜಗರಣಿ ಗ್ರಾಮದವರು ಅನ್ನುವುದು ಸರಿ. ನನ್ನ ಅಜ್ಜನಿಗೆ ಸುಮಾರು 70 ರಿಂದ 80 ಎಕರೆ ಜಮೀನು ಇತ್ತು ಅಂದರೆ ಸರಿ. ಅವರು ಕೇವಲ ವ್ಯವಸಾಯ ಮಾಡುತ್ತಿದ್ದರು ಅಂದರೆ ಸರಿ. ನನ್ನ ತಾತನಿಗೆ ವ್ಯವಸಾಯದಿಂದ ಬಂದ ಉತ್ಪನ್ನವನ್ನು ಹೊರತು ಪಡಿಸಿ ಬೇರೆ ಯಾವುದೇ ಆದಾಯ ಮೂಲ ಇರಲಿಲ್ಲ ಅನ್ನುವುದು ಸರಿ.

2. ನನ್ನ ವಾದ ಪತ್ರದ ಖಂಡಿಕೆ 5 ರಲ್ಲಿ ತೋರಿಸಿರುವ ಎಲ್ಲಾ ಸ್ವತ್ತುಗಳು ನನ್ನ ಅಜ್ಜ ಲಕ್ಷ್ಮಣ ಜಾದವರವರಿಂದ ಬಂದ ಸ್ವತ್ತುಗಳು ಅಂದರೆ ಸರಿ. ಆ ಸ್ವತ್ತು ಪಿತ್ರಾರ್ಜಿತ ಸ್ವತ್ತುಗಳು ಅನ್ನುವುದು ಸರಿ. ಆ ಎಲ್ಲಾ ಸ್ವತ್ತುಗಳ ಸಹ ನನ್ನ ಅಜ್ಜನ ತಂದೆಯಿಂದ ನನ್ನ ಅಜ್ಜನಿಗೆ ಬಂದ ಸ್ವತ್ತುಗಳು ಅಂದರೆ ಆ ವಿಚಾರ ನನಗೆ ಗೊತ್ತಿಲ್ಲ.

3. ನನ್ನ ಅಜ್ಜ ಲಕ್ಷ್ಮಣ ಜಾದವರವರಿಗೆ ಒಟ್ಟು 4 ಜನ ಮಕ್ಕಳು ಅನ್ನುವುದು ಸರಿ. ಅವರುಗಳೆಂದರೆ ಗಂಗಾರಾಮ, ಮೊನಪ್ಪಾ, ನಾರಾಯಣ ಮತ್ತು ಪ್ರಭಾಕರ @ ಭರಮಣ್ಣ ಅನ್ನುವುದು ಸರಿ. ಅವರಿಗೆ ಕೃಷ್ಣಾಬಾಯಿ ಎಂಬ ಒಬ್ಬ ಹೆಣ್ಣು ಮಗಳು ಇದ್ದಳು ಅಂದರೆ ಸರಿ.

4. ಬೆಳಗಾವಿಯ ಕಾಲೇಜ ರಸ್ತೆಯಲ್ಲಿರುವ ಸ್ವತ್ತಿನ ಮೂಲ ಸಿ.ಟಿ.ಎಸ್. ಸಂಖ್ಯೆ 3439/1ಬಿ. ಸದರಿ ಸ್ವತ್ತನ್ನು ವಿಂಗಡಿಸಿ ಒಂದು ಭಾಗಕ್ಕೆ 3439/2ಬಿ ಎಂದು ಸಂಖ್ಯೆಯನ್ನು ನೀಡಲಾಗಿದೆ ಅಂದರೆ ಸರಿ. ಸಿ.ಟಿ.ಎಸ್. ಸಂಖ್ಯೆ 3439/1ಬಿ ಸ್ವತ್ತನ್ನು ನನ್ನ ಅಜ್ಜ ಲಕ್ಷ್ಮಣ ಜಾದವ ಖರೀದಿಸಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಅವರ ನಾಲ್ಕು ಜನ ಗಂಡು ಮಕ್ಕಳು ಡಿಸೆಂಬರ 1960 ರಲ್ಲಿ ಖರೀದಿಸಿದ್ದರು ಎಂದು ಹೇಳುತ್ತಾರೆ. ಆದರೆ ಸದರಿ ಖರೀದಿ ಪತ್ರ ದೊಡ್ಡ ಮಗನಾದ ಗಂಗಾರಾಮ ಜಾದವರವರ ಹೆಸರಿನಲ್ಲಿ ಇದೆ. ಆ ಕಾಲಕ್ಕೆ ನನ್ನ ಅಜ್ಜ ಲಕ್ಷ್ಮಣ ಜಾದವ ಬದುಕಿರಲಿಲ್ಲ. ಆ ಸ್ವತ್ತು ಗಂಗಾರಾಮ ಜಾದವರವರು ಒಟ್ಟು ಕುಟುಂಬದ

ಮುಖ್ಯಸ್ಥ ಎಂದು ಆತನ ಹೆಸರಿನಲ್ಲಿ ಖರೀದಿಸಲಾಗಿತ್ತು ಅಂದರೆ ಸರಿ.

5. ನಾಲ್ಕೂ ಜನ ಗಂಡು ಮಕ್ಕಳಲ್ಲಿ ಗಂಗಾರಾಮ ಜಾದವ ಹಾಗೂ ನಾರಾಯಣ ಜಾದವರರವರು ಸಿಟಿಎಸ್. ನಂ. 3439/1ಬಿ ಮತ್ತು 3439/2ಬಿಯಲ್ಲಿನ ತಮ್ಮ ಅವಿಭಾಜಿತ 2/4 ಭಾಗವನ್ನು ಮಾರಾಟ ಮಾಡಿದ್ದರು ಅನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ 4 ಜನ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡ ನಂತರ 1981 ರಲ್ಲಿ ಗಂಗಾರಾಮ ಜಾದವ ಹಾಗೂ ನಾರಾಯಣ ಜಾದವ ತಮ್ಮ ಭಾಗದ ಹಿಸ್ಸೆಯನ್ನು ಮಾರಾಟ ಮಾಡಿದ್ದರು ಎಂದು ಹೇಳುತ್ತಾರೆ. ಆದರೆ ಅವರುಗಳ ನಡುವೆ ನೊಂದಾಯಿತ ವಿಭಾಗ ಪತ್ರದ ಮೂಲಕ ಭಾಗವಾಗಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಹೇಳುತ್ತಾರೆ 4 ಅಣ್ಣ ತಮ್ಮಂದಿರ ನಡುವೆ ಈ ಮೇಲೆ ಹೇಳಿದ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ವಿಭಾಗವಾಗಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮತ್ತೆ ಹೇಳುತ್ತಾರೆ ಗಂಗಾರಾಮ ಹಾಗೂ ನಾರಾಯಣ ಜಾದವರರವರು ಈ ಮೇಲೆ ಹೇಳಿದ ಸ್ವತ್ತುಗಳಲ್ಲಿ ವಿಭಾಗಕ್ಕಿಂತ ಮುಂಚೆ ತಮ್ಮ ಅವಿಭಾಜಿತ 2/4 ಭಾಗವನ್ನು ಶಾಂತಾರಾಮ ವ್ಯಸನೆ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಹೇಳುತ್ತಾರೆ ಗಂಗಾರಮ ಜಾದವರರವರು ಈ ಮೇಲೆ ಹೇಳಿದ ಎರಡೂ ಸಿಟಿಎಸ್ ಸ್ವತ್ತುಗಳನ್ನು ಏಕಪಕ್ಷಿಯವಾಗಿ ಶಾಂತಾರಾಮ ವ್ಯಸನೆ ಅವರಿಗೆ ಮಾರಾಟ ಮಾಡಿದ್ದು, ಆ ಕ್ರಯ ಪತ್ರಕ್ಕೆ ನಾರಾಯಣ ವ್ಯಸನೆರವರು ಸಾಕ್ಷಿ ಆಗಿ ಸಹಿ ಮಾಡಿದ್ದರು ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ಅವಧಿ ಮುಗಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ. ಎ.ಬಿ.ಸಿ. ವಕೀಲರಿಂದಃ**

6. ನಾನು, ನನ್ನ ತಾಯಿ ಹಾಗೂ ನನ್ನ ಸಹೋದರರು OS No.253/2009 ಎಂಬ ಪ್ರಕರಣವನ್ನು ರುಕ್ಮೀಣಿ ಬಾಬುರಾವ ಮೋರೆ ಹಾಗೂ ಇತರರ ವಿರುದ್ಧ ಈಜಮೆಂಟರಿ ಹಕ್ಕುಗಳ ಬಗ್ಗೆ ದಾವೆ ದಾಖಲಿಸಿದ್ದೇವು ಎನ್ನುವುದು ಸರಿ. ಆ ದಾವೆಯಲ್ಲಿ ವಾದಿಗಳಾದ ನಾವೆಲ್ಲರೂ ಸಹ ಮಾಲೀಕರಾಗಿ ಒಟ್ಟಾಗಿ ಸಿಟಿಎಸ್. ನಂ.3439/1ಬಿ ಮತ್ತು 3439/2ಬಿ ಸ್ವತ್ತಿನ ಸ್ವಾಧೀನಲ್ಲಿದ್ದೇವೆ ಎಂದು ಬರೆದಿದ್ದೇವೆ ಎಂದರೆ ಸರಿ. ಮುಂದುವರೆದು ಸದರಿ ದಾವೆಯಲ್ಲಿ ಈ ಮೇಲೆ ಹೇಳಿದ ಸ್ವತ್ತುಗಳನ್ನು ಗಂಗಾರಾಮ ಜಾಧವ ರವರ ಹೆಸರಿನಲ್ಲಿ ಖರೀದಿಸಿದ್ದರು ಸಹಿತ ಅವರು ಒಟ್ಟು ಕುಟುಂಬದ ವ್ಯವಸ್ಥಾಪಕರಾಗಿ ಹಾಗೂ ಒಟ್ಟು ಕುಟುಂಬದ ಪರವಾಗಿ ಸ್ವತ್ತನ್ನು ಖರೀದಿಸಿದ್ದು ಅದು ಒಟ್ಟು ಕುಟುಂಬದ ಆಸ್ತಿಯಾಗಿದೆ ಎಂದು ಬರೆದಿದ್ದೇವೆ ಎಂದರೆ ಸರಿ. ಅಸಲು ದಾವಾ ಸಂಖ್ಯೆಃ 253/2009 ದಾವೆ ತೀರ್ಮಾನಕ್ಕೆ ಇನ್ನೂ ಬಾಕಿ ಇದೆ ಎನ್ನುವುದು ಸರಿ. ಅಸಲು ದಾವೆ ಸಂಖ್ಯೆಃ 157/2001, ಅಸಲು ದಾವೆ ಸಂಖ್ಯೆಃ 253/2009 ರಲ್ಲಿನ ಪ್ರತಿವಾದಿಗಳ ವಿರುದ್ಧ ದಾಖಲಿಸಿದ್ದೇವು ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ, ಸದರಿ ದಾವೆಯು ಸಹ ಇನ್ನೂ ತೀರ್ಮಾನಕ್ಕೆ ಬಾಕಿ ಇದೆ ಎಂದು ಹೇಳುತ್ತಾರೆ. ಅದು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ ದಾವೆ ಎನ್ನುವುದು ಸರಿ. ನಿಪಿ–5 ರಲ್ಲಿ ಇಂಗ್ಲೀಷನಲ್ಲಿ Affidavit ಎಂದು ಬರೆದಿದ್ದು, ಹಿಂದಿಯಲ್ಲಿ ಇಚ್ಛಾಪತ್ರ ಎಂದು ಬರೆದಿದೆ ಎಂದರೆ ಸರಿ. ನಿಪಿ–5 ದಾಖಲೆಗೆ ಬಳಸಿರುವ ಸ್ಟ್ಯಾಂಪ್ ಪೇಪರನ್ನು ನಾನೇ ಖರೀದಿ ಮಾಡಿದ್ದು ಅದರ ಮೇಲೆ ನನ್ನ ಸಹಿ ಸಹ ಇದೆ ಎನ್ನುವುದು ಸರಿ. ನಿಪಿ–5 ರ 4ನೇ ಪುಟವನ್ನು ಸಂಪೂರ್ಣವಾಗಿ ಖಾಲಿ ಬಿಟ್ಟು 5ನೇ ಪುಟದಿಂದ ಮತ್ತೇ ಬರವಣಿಗೆಯನ್ನು ಮುಂದುವರೆಸಲಾಗಿದೆ ಎನ್ನುವುದು ಸರಿ. ನಿಪಿ–5 ರ 1ನೇ ಪುಟದಲ್ಲಿ ರೂ.100 ಮುಖಬೆಲೆಯ ಸ್ಟ್ಯಾಂಪ್ ಪೇಪರ್ ಜೊತೆಗೆ ತಲಾ 0.35 ಪೈಸೆ ಮುಖಬೆಲೆಯ 3 ಸ್ಟ್ಯಾಂಪ್ ಪೇಪರಗಳನ್ನು ಸಹ ಮಾರಾಟ ಮಾಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅದಲ್ಲದೇ 0.35 ಪೈಸೆ ಮುಖಬೆಲೆಯ 3 ಸ್ಟ್ಯಾಂಪ್ ಪೇಪರಗಳಲ್ಲಿ ಅದನ್ನು ಮಾರಾಟ ಮಾಡಿದ ಸ್ಟ್ಯಾಂಪ್ ವೆಂಡರ್ ಹೆಸರು ಹಾಗೂ ಆತನ ಲೈಸೆನ್ಸ್ ನಂಬರ ಹಾಗೂ ಶೇಜ್ ನಂಬರ ಸಹ ನಮೂದಿಸಿಲ್ಲ ಎನ್ನುವುದು ಸರಿ. ನಿಪಿ–5 ದಾಖಲೆಯಲ್ಲಿ ಮನೆಯ ಸಂಖ್ಯೆಯನ್ನು ತಿದ್ದಿ ಬರೆಯಲಾಗಿದೆ ಎನ್ನುವುದು ಸರಿಯಲ್ಲ.

7. ನಿಪಿ–5 ರಲ್ಲಿ ಸಾಕ್ಷಿಗಳಾಗಿ ಸಹಿ ಹಾಕಿರುವವರ ವಿಲಾಸಗಳನ್ನು ನಮೂದಿಸಿಲ್ಲ ಎನ್ನುವುದು ಸರಿ. ನಿಪಿ–5 ದಾಖಲೆಯನ್ನು ಬರೆದ ವ್ಯಕ್ತಿಯ ಬಗ್ಗೆ ನಮೂದಿಸಿಲ್ಲ ಹಾಗೂ ಆತನ ಸಹಿ ಇಲ್ಲ ಎನ್ನುವುದು ಸರಿ. ನಿಪಿ–5 ದಾಖಲೆಯನ್ನು ದಿಃ 25.02.2000 ರಲ್ಲಿ ತಯಾರಿಸಲಾಗಿದೆ ಎಂದು ನಮೂದಾಗಿದೆ ಎನ್ನುವುದು ಸರಿ. ನಿಪಿ–5 ರಲ್ಲಿ ನನ್ನ ತಂದೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿದ ವೈದ್ಯರಾದ ಡಾ.ಭೋಗನ್ ಆ ಪ್ರಮಾಣ ಪತ್ರವನ್ನು ದಿಃ 23.09.2000 ರಲ್ಲಿ ನೀಡಿದ್ದೇನೆ ಎಂದು ನಮೂದಿಸಿದ್ದಾರೆ ಎನ್ನುವುದು ಸರಿ. ನಿಪಿ–5 ರಲ್ಲಿ ವೈದ್ಯರು ತಮ್ಮ ಪ್ರಮಾಣ ಪತ್ರವನ್ನು ನೀಡಿ ದಿನಾಂಕವನ್ನು ನಮೂದಿಸಿದ್ದು, ಅದರಲ್ಲಿ 23.09 ಎಂದಾದ ನಂತರ ಇಸವಿಯನ್ನು ಅಳಿಸಿ ನಂತರದಲ್ಲಿ ಎರಡು ಸೊನ್ನೆಗಳನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ–5 ರ ಕೊನೆಯ ಪುಟದಲ್ಲಿ ವೈದ್ಯರ ಸೀಲು ಹಾಗೂ ಸಹಿ ಇಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ವೈದ್ಯರ ಸಹಿ ಮತ್ತು ಸೀಲುಗಳು ಬೇರೆ ಬೇರೆ ಕಡೆ ಇವೆ ಎಂದು ಹೇಳುತ್ತಾರೆ. ವೈದ್ಯರ ಸೀಲಿನ ಮೇಲೆಯೇ ವೈದ್ಯರು ಸಹಿ ಮಾಡಲು ಸಾಕಷ್ಟು ಜಾಗ ಇದೆ ಎಂದರೆ ಸರಿ. ನಿಪಿ–5 ಇಚ್ಛಾ ಪತ್ರವನ್ನು ನನ್ನ ತಂದೆ–ತಾಯಿ ಒಟ್ಟಾಗಿ ಸೇರಿ ಬರೆದುಕೊಟ್ಟಂತೆ ಇದೆ ಎನ್ನುವುದು ಸರಿ.

8. ನನ್ನ ತಂದೆ ದಿಃ 09.06.2005 ರಲ್ಲಿ ತೀರಿಕೊಂಡಿದ್ದು, ನನ್ನ ತಾಯಿ ದಿಃ 15.09.2011 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ವಾದ ಪತ್ರದ ಖಂಡಿಕೆ 4 ರಲ್ಲಿ ಇತ್ತೀಚೆಗೆ ನನ್ನ ತಾಯಿ ಟ್ರಂಕ್ ನ್ನು ತೆರೆದಾಗ ಅದರಲ್ಲಿ ನಿಪಿ–5 ಸಿಕ್ಕಿತ್ತು ಎಂದು ಬರೆದಿದ್ದೇನೆ, ಆದರೆ ಆ ಟ್ರಂಕ್ ನ್ನು ಯಾವ ದಿನ ತೆರೆದಿದ್ದೆ ಎಂದು ಬರೆದಿಲ್ಲ ಎನ್ನುವುದು ಸರಿ. ಯಾವ ದಿನಾಂಕದಂದು ನನ್ನ ತಾಯಿ ಟ್ರಂಕ್ ನ್ನು ತೆಗೆದಾಗ ನಿಪಿ–5 ಸಿಕ್ಕಿತು ಎಂದು ಈಗ ಹೇಳಲು ಬರುವುದಿಲ್ಲ. ನಾನು ಈ ಅರ್ಜಿಯನ್ನು ದಿಃ 08.01.2016 ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎನ್ನುವುದು ಸರಿ. ಈ ದಾವೆಯನ್ನು ಹೂಡುವ ಎಷ್ಟು ದಿನ, ತಿಂಗಳು ಹಾಗೂ ವರ್ಷದ ಹಿಂದೆ ನನ್ನ ತಾಯಿಯ ಟ್ರಂಕ್ ನ್ನು ತೆಗೆದಾಗ ನಿಪಿ–5 ಸಿಕ್ಕಿತು ಎಂದು ಈಗ ನನಗೆ ಹೇಳಲು ಬರುವುದಿಲ್ಲ. ನನಗೆ ನಿಪಿ–5 ನ್ನು ಓದಿದ ನಂತರದಲ್ಲಿ ಸದರಿ ಇಚ್ಛಾ ಪತ್ರವನ್ನು ನನ್ನ ತಂದೆ–ತಾಯಿ ಅದರಲ್ಲಿ ಸಹಿ ಹಾಕಿರುವ ಸಾಕ್ಷಿಗಳಾದ ಕಿಶೋರ ಘಾಟಗೆ ಹಾಗೂ ಸಿ. ಎಸ್. ವಾಂಕಡೆ ರವರ ಸಮಕ್ಷಮ ಬರೆದಿಟ್ಟಿದ್ದಾರೆ ಎಂದು ತಿಳಿದು ಅದನ್ನು ನಾನು ನನ್ನ ವಾದ ಪತ್ರದಲ್ಲಿ ಬರೆದಿದ್ದೇನೆ. ನಿಪಿ–5 ಸಿಕ್ಕ ನಂತರ ಅದರಲ್ಲಿ ಸಾಕ್ಷಿಗಳಾದ ಸಹಿ ಹಾಕಿರುವವರನ್ನು

ನಾನು ಹೋಗಿ ಇಲ್ಲಿಯವರೆಗೂ ಭೇಟಿ ಮಾಡಿರುವುದಿಲ್ಲ. ನಿಪಿ–5ನ್ನು ಬರೆಯುವ ಕಾಲಕ್ಕೆ ನನ್ನ ತಂದೆ ಆರೋಗ್ಯ ಸುಸ್ಥಿತಿಯಲ್ಲಿತ್ತು ಎಂದು ಬರೆದಿದ್ದೇನೆ. ಅದನ್ನು ಸಾಬೀತು ಪಡಿಸಲು ನಿಪಿ–5 ರಲ್ಲಿ ವೈದ್ಯರು ನೀಡಿರುವ ಪ್ರಮಾಣ ಪತ್ರವನ್ನು ಬಿಟ್ಟರೇ ಬೇರೆ ಪ್ರತ್ಯೇಕ ದಾಖಲೆ ನನ್ನ ಬಳಿ ಇಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯು ಮುಂದುವರೆದ ಪಾಟೀ ಸವಾಲಿಗೆ ಮಾನ್ಯ ಪ್ರತಿವಾದಿ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.